# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:27-03-2026 ರಂದು ಶುಕ್ರವಾರ "ಶತಮಾನೋತ್ಸವ ಭವನದ ಹೊಸ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ 177ನೇ "ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎ.ಎಲ್. ಮಂಜುನಾಥ್ ಕೆ.ಎ.ಎಸ್., ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಆರ್. ತಿಮ್ಮರಾಯಪ್ಪ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ಸಂಧ್ಯಾ ಕಾವೇರಿ, ಪ್ರಾಂಶುಪಾಲರು | ಸದಸ್ಯರು |
| 5. | ಶ್ರೀ ಉಲ್ಲಾಸ್ ಇ.ಜಿ., ಪ್ರಾಂಶುಪಾಲರು | ಸದಸ್ಯರು |
| 6. | ಡಾ. ಚಿದಾನಂದ ಎನ್.ಕೆ., ಪ್ರಾಂಶುಪಾಲರು | ಸದಸ್ಯರು |
| 7. | ಡಾ. ಎಂ. ವೆಂಕಟೇಶ್, ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಪ್ರಭಾಕರ್ ಎಸ್. ಮುಂಟೂರೆ, ಪ್ರಾಂಶುಪಾಲರು | ಸದಸ್ಯರು |
| 9. | ಶ್ರೀ ರಾಜಣ್ಣ ಕೆ. ಪ್ರಾಂಶುಪಾಲರು | ಸದಸ್ಯರು |
| 10. | ಡಾ. ರಾಕೇಶ್ ಎಸ್.ಪಿ., ಪ್ರಾಂಶುಪಾಲರು | ಸದಸ್ಯರು |
| 11. | ಡಾ. ಶಿವಕುಮಾರ್ ಜಿ.ಎಸ್., ಪ್ರಾಂಶುಪಾಲರು | ಸದಸ್ಯರು |
| 12. | ಡಾ. ಜಿ.ಎಂ. ಗಣೇಶ್, ಪ್ರಾಂಶುಪಾಲರು | ಸದಸ್ಯರು |
| 13. | ಪ್ರೊ. ಅಶೋಕ್ ಆರ್. ಲಮಾಣಿ. ಪ್ರಾಧ್ಯಾಪಕರು | ಸದಸ್ಯರು |
| 14. | ಪ್ರೊ. ಜಿ.ಜೆ. ಸತೀಶ್. ಪ್ರಾಧ್ಯಾಪಕರು | ಸದಸ್ಯರು |
| 15. | ಪ್ರೊ. ವರ್ಗೀಸ್ ಪಿ.ಎ. ಪ್ರಾಧ್ಯಾಪಕರು | ಸದಸ್ಯರು |
| 16. | ಪ್ರೊ. ವೆಂಕಟೇಶ್ ಎಸ್. ಪ್ರಾಧ್ಯಾಪಕರು | ಸದಸ್ಯರು |
| 17. | ಪ್ರೊ. ಚಂದ್ರಶೇಖರ್ ಎಸ್, ಡೀನರು, ಕಲಾ ನಿಕಾಯ | ಸದಸ್ಯರು |
| 18. | ಪ್ರೊ. ರಾಜ ನಾಯಕ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 19. | ಪ್ರೊ. ಗಜಾನನ ಪ್ರಭು ಬಿ, ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 20. | ಪ್ರೊ. ಯೋಗೇಂದ್ರ ಕೆ, ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ | ಸದಸ್ಯರು |
| 21. | ಪ್ರೊ. ಗಜಾನನ ಪ್ರಭು ಬಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, | ಸದಸ್ಯರು |
| 22. | ಡಾ. ಎನ್.ಡಿ. ವಿರೂಪಾಕ್ಷ, ನಿರ್ದೇಶಕರು ದೈಹಿಕ ಶಿಕ್ಷಣ | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ಡಾ. ಕೇಶವ ಹೆಚ್, ಜಂಟಿ ನಿರ್ದೇಶಕರು | ಸದಸ್ಯರು |
| 2. | ಶ್ರೀ ಹೆಚ್.ಡಿ. ತಮ್ಮಯ್ಯ, ಶಾಸಕರು, ಚಿಕ್ಕಮಗಳೂರು ಕ್ಷೇತ್ರ | ಸದಸ್ಯರು |
| 3. | ಶ್ರೀ ಬಿ.ಕೆ. ಸಂಗಮೇಶ್ವರ, ಶಾಸಕರು, ಭದ್ರಾವತಿ | ಸದಸ್ಯರು |
| 4. | ಶ್ರೀ ಡಿ.ಎಸ್. ಅರುಣ್, ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಸದಸ್ಯರು |
| 5. | ಶ್ರೀ ಸೂರಜ್ ರೇವಣ್ಣ, ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಸದಸ್ಯರು |
| 6. | ಡಾ.ಬಿ.ಜಿ. ಚನ್ನಪ್ಪ, ಪ್ರಾಂಶುಪಾಲರು | ಸದಸ್ಯರು |
| 7. | ಪ್ರೊ. ನಮ್ರತಾ ಎಂ. ಪ್ರಾಧ್ಯಾಪಕರು | ಸದಸ್ಯರು |
| 8. | ಡಾ. ಜಿ. ಪ್ರಶಾಂತ ನಾಯಕ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರು | ಸದಸ್ಯರು |
| 9. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 10. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 11. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 12. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

ನಿರ್ಣಯ:

2026:

**ಪೂರ್ವಾನುಮತಿಯೊಂದಿಗೆ ಗೈರುಹಾಜರಾದ ಸದಸ್ಯರು:**

1. ಪ್ರೊ.ಹೆಚ್.ಎನ್. ರಮೇಶ್, ಹಣಕಾಸು ಅಧಿಕಾರಿಗಳು ಮತ್ತು ಡೀನರು, ವಾಣಿಜ್ಯ ನಿಕಾಯ — ಸದಸ್ಯರು
2. ಡಾ. ಆರ್.ಹೆಚ್. ವಾಲ್ಮೀಕಿ, ಗ್ರಂಥಪಾಲಕರು. (ಪ್ರಭಾರ) — ಸದಸ್ಯರು

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಡೀನರ ಜೇಷ್ಠತೆ ಹಾಗೂ ಸರದಿಯ ಮೇಲೆ ಪದನಿಮಿತ್ತ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ನಾಮನಿರ್ದೇಶನಗೊಂಡ ಪ್ರೊ. ರಾಜ ನಾಯಕ, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ವಿಭಾಗ ಮತ್ತು ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ಪ್ರೊ.ಹೆಚ್.ಎನ್. ರಮೇಶ್, ಹಿರಿಯ ಪ್ರಾಧ್ಯಾಪಕರು, ಎಂ.ಬಿ.ಎ. ವಿಭಾಗ ಮತ್ತು ಡೀನರು, ವಾಣಿಜ್ಯ ನಿಕಾಯ ಇವರನ್ನು ಸಭೆಗೆ ಸ್ವಾಗತಿಸಲಾಯಿತು. ಇದೇ ಸಂದರ್ಭದಲ್ಲಿ ಡೀನರ ಅವಧಿ ಮುಗಿದ ಪ್ರೊ. ಆರ್. ಹಿರೇಮಣಿನಾಯ್ಕ, ಹಿರಿಯ ಪ್ರಾಧ್ಯಾಪಕರು, ಎಂ.ಬಿ.ಎ., ವಿಭಾಗ ಮತ್ತು ಪ್ರೊ. ವೈ.ಎಲ್. ರಾಮಚಂದ್ರ, ನಿವೃತ್ತ ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ವಿಭಾಗ ಇವರಿಗೆ ಸಭೆಯು ಅಭಿನಂದಿಸಿತು. ದಿನಾಂಕ:31-03-2026 ರಂದು ವಯೋನಿವೃತ್ತಿ ಹೊಂದುತ್ತಿರುವ, ಪ್ರಾಂಶುಪಾಲರ ಜೇಷ್ಠತೆಯ ಮೇರೆಗೆ ವಿದ್ಯಾವಿಷಯಕ ಪರಿಷತ್ ಸದಸ್ಯರಾದ ಶ್ರೀ ರಾಜಣ್ಣ ಕೆ. ಅವರನ್ನು ವಿಶ್ವವಿದ್ಯಾಲಯದ ಪರವಾಗಿ ಅಭಿನಂದಿಸಲಾಯಿತು.

ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಮಾನ್ಯ ಕುಲಾಧಿಪತಿಯವರ ಅನುಮೋದನೆಯ ಮೇರೆಗೆ ವಿಶ್ವವಿದ್ಯಾಲಯದ 35 ಮತ್ತು 36ನೇ ವಾರ್ಷಿಕ ಘಟಿಕೋತ್ಸವವನ್ನು ದಿನಾಂಕ:06-05-2026ರಂದು ಏರ್ಪಡಿಸಲಾಗುವುದು. ಇದಕ್ಕೆ ಅಗತ್ಯ ಸಿದ್ಧತೆಗಳನ್ನು ಈಗಾಗಲೇ ಆರಂಭಿಸಲಾಗಿದೆ. ಎಲ್ಲಾ ಸದಸ್ಯರು ಇದರಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿಕೊಡುವಂತೆ ಕೋರಿದರು. ಮುಂದುವರೆದು ಮಾತನಾಡಿದ ಅವರು, ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದ 2026-27ನೇ ಸಾಲಿನ ಆಯವ್ಯಯದಲ್ಲಿ ಕುವೆಂಪು ವಿಶ್ವವಿದ್ಯಾಲಯದಲ್ಲಿ ಪ್ರೊ. ಯು.ಆರ್. ಅನಂತಮೂರ್ತಿ ಅಧ್ಯಯನ ಪೀಠ ಸ್ಥಾಪಿಸುವುದಾಗಿ ಘೋಷಿಸಿರುವುದಕ್ಕೆ ಕುವೆಂಪು ವಿಶ್ವವಿದ್ಯಾಲಯದ ಸಿಂಡಿಕೇಟ್ ಪರವಾಗಿ ಸರ್ಕಾರಕ್ಕೆ ಅಭಿನಂದಿಸುವುದಾಗಿ ತಿಳಿಸಿದರು. ಈ ಪೀಠವನ್ನು ಸಕ್ರಿಯವಾಗಿ ನಡೆಸಲು ಸಲಹಾ ಸಮಿತಿ ರಚಿಸಲಾಗುವುದು ಹಾಗೂ ನಿಷ್ಕ್ರಿಯವಾಗಿರುವ ಕೆಲವು ಅಧ್ಯಯನ ಪೀಠ/ಕೇಂದ್ರಗಳು ಸಕ್ರಿಯಗೊಂಡು ಉತ್ತಮ ಕಾರ್ಯಕ್ರಮ ನಡೆಸಲು ಕ್ರಮವಹಿಸಲಾಗುವುದು ಎಂದರು.

## ಪ್ರಾಧಿಕಾರಗಳ ವಿಭಾಗ

**2026:ಎಸಿ-1.01:** ದಿನಾಂಕ:31-10-2025 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ:** ದಿನಾಂಕ:31-10-2025 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಕುಲಸಚಿವರು ಸಭೆಯ ಅನುಮೋದನೆಗೆ ಮಂಡಿಸಿದರು. ವಿಷಯ ಸಂಖ್ಯೆ: 2025:ಎಸಿ-4.02 ಬಗ್ಗೆ ಡಾ.ಜಿ.ಎಂ.ಗಣೇಶ್‌ರವರು ಮಾತನಾಡಿ, ವಿಶ್ವವಿದ್ಯಾಲಯಗಳ ಸ್ವಾಯತ್ತತೆಯ ಅಧಿಕಾರಗಳನ್ನು ಸರ್ಕಾರ ಹಿಂತೆಗೆದುಕೊಂಡಿದೆ. ಎಲ್ಲಾ ನಿರ್ಣಯಗಳನ್ನು ಸರ್ಕಾರವೇ ತೆಗೆದುಕೊಳ್ಳುತ್ತದೆ. ಸಂಯೋಜಿತ ಕಾಲೇಜುಗಳ ಶಾಶ್ವತ ಸಂಯೋಜನೆಗೆ ನ್ಯಾಕ್ ಮಾನ್ಯತೆ ಅಗತ್ಯವಿಲ್ಲವೆಂದು ಈ ಹಿಂದೆ ಸರ್ಕಾರದ ಆದೇಶದಲ್ಲಿ ತಿಳಿಸಿದೆ. ಆದರೆ, ಈಗ ಮತ್ತೆ ನ್ಯಾಕ್ ಮಾನ್ಯತೆಯನ್ನು ಕೇಳುತ್ತಿದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಈ ವಿಷಯದ ಕುರಿತಾಗಿ ವಿಶ್ವವಿದ್ಯಾಲಯದಿಂದ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

**ನಿರ್ಣಯ:** ಮೇಲಿನ ಚರ್ಚೆಯ ನಂತರ ಕ್ರಮಕೈಗೊಳ್ಳಲು ನಿರ್ಣಯಿಸಿ, ದಿನಾಂಕ:31-10-2025 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಲಾಯಿತು.

**2026:ಎಸಿ-1.02:** ದಿನಾಂಕ:31-10-2025 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ಚರ್ಚೆ:** ವಿಷಯ ಸಂಖ್ಯೆ:2025:ಎಸಿ-4.04ಬಗ್ಗೆ ಡಾ.ಎಂ.ಜಿ.ಗಣೇಶ್‌ರವರು ಮಾತನಾಡಿ, ಬಿ.ಇಡಿ. ಎರಡು ವರ್ಷಗಳ ಕೋರ್ಸ್ ಆಗಿದ್ದು, ರೋವರ್ಸ್/ರೇಂಜರ್ಸ್ ಶುಲ್ಕಗಳನ್ನು ಮೊದಲನೇ ವರ್ಷ ಮಾತ್ರ ಸಂಗ್ರಹಿಸಬೇಕೇ? ಅಥವಾ 2ನೇ ವರ್ಷ ಕೂಡ ಸಂಗ್ರಹಿಸಬೇಕೆ ಎಂಬ ಮಾಹಿತಿ ಇಲ್ಲ. ಕಳೆದ ವರ್ಷ ಪಾವತಿಸಿದ ಮೊತ್ತದಲ್ಲಿ ಕಾಲೇಜಿನಲ್ಲಿ ಕಾರ್ಯಕ್ರಮ ನಡೆಸಿದ ವೆಚ್ಚ ಬಂದಿಲ್ಲ ಎಂದರು.

ಕುಲಸಚಿವರು ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು ಎಂದರು.

**ನಿರ್ಣಯ:** ಮೇಲಿನ ಚರ್ಚೆಯ ನಂತರ ಪರಿಶೀಲಿಸಿ ಕ್ರಮಕೈಗೊಳ್ಳಲು ನಿರ್ಣಯಿಸಿ, ದಿನಾಂಕ:31-10-2025 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಅನುಮೋದಿಸಿ ದೃಢೀಕರಿಸಲಾಯಿತು.

**2026:ಎಸಿ-1.03:** ದಿನಾಂಕ: 18-02-2026 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಮಿತಿ (CAC) ಸಭೆಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ಚರ್ಚೆಯ ನಂತರ ದಿನಾಂಕ: 18-02-2026 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಮಿತಿ (CAC) ಸಭೆಯ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಲಾಯಿತು.

**2026:ಎಸಿ-1.04:** ದಿನಾಂಕ: 18-02-2026 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಮಿತಿ (CAC) ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ನಿರ್ಣಯ:** ಚರ್ಚೆಯ ನಂತರ ದಿನಾಂಕ: 18-02-2026 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಮಿತಿ (CAC) ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಅನುಮೋದಿಸಿ ದೃಢೀಕರಿಸಲಾಯಿತು.

## ಶೈಕ್ಷಣಿಕ ವಿಭಾಗ

**2026:ಎಸಿ-1.05:** ವಿಶ್ವವಿದ್ಯಾಲಯದ ಘಟಕ ಕಾಲೇಜು ಆಗಿರುವ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ಪ್ರಾಕ್ತನಶಾಸ್ತ್ರ ಮತ್ತು ವಸ್ತುಸಂಗ್ರಹಾಲಯ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯ ಗುಚ್ಛಗಳ ಪ್ರವೇಶ ಪುನರಾರಂಭ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಘಟಕ ಕಾಲೇಜಾಗಿರುವ ಶಿವಮೊಗ್ಗ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ 1995-96ನೇ ಶೈಕ್ಷಣಿಕ ಸಾಲಿನಿಂದ ಚಾಲ್ತಿಯಲ್ಲಿದ್ದ ಪ್ರಾಕ್ತನಶಾಸ್ತ್ರ ಮತ್ತು ವಸ್ತುಸಂಗ್ರಹಾಲಯ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯ ಗುಚ್ಛಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆಯಾದ ಹಿನ್ನೆಲೆಯಲ್ಲಿ 2016-17ನೇ ಶೈಕ್ಷಣಿಕ ಸಾಲಿನಲ್ಲಿ ಸದರಿ ವಿಷಯ ಗುಚ್ಛಗಳನ್ನು ಪ್ರವೇಶಾತಿಯಿಂದ ಕೈಬಿಡಲಾಗಿದ್ದು, ಪ್ರಸ್ತುತ, ಸದರಿ ವಿಷಯ ಗುಚ್ಛಗಳಿಗೆ ವಿದ್ಯಾರ್ಥಿಗಳು ಪ್ರವೇಶ ಬಯಸುತ್ತಿರುವುದರಿಂದ ಪ್ರತಿ ವಿಷಯಕ್ಕೆ ತಲಾ 30 ವಿದ್ಯಾರ್ಥಿಗಳ ಸಂಖ್ಯೆಯೊಂದಿಗೆ 2026-27ನೇ ಶೈಕ್ಷಣಿಕ ಸಾಲಿನಿಂದ ಪುನರಾರಂಭ ಮಾಡಲು ಸಭೆಯು ಅನುಮತಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

**2026:ಎಸಿ–1.05(ಎ):** ವಿಶ್ವವಿದ್ಯಾಲಯದ ಘಟಕ ಕಾಲೇಜು ಆಗಿರುವ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ಈಗಿರುವ ಐಚ್ಛಿಕ ವಿಷಯಗಳ ಜೊತೆಗೆ ಹೊಸದಾಗಿ **"ಇತಿಹಾಸ – ಐಚ್ಛಿಕ ಕನ್ನಡ – ರಾಜ್ಯಶಾಸ್ತ್ರ" (ಹೆಚ್.ಕೆ.ಪಿ.) ಐಚ್ಛಿಕ ವಿಷಯ ಗುಚ್ಛವನ್ನು** ಸೇರ್ಪಡೆಗೊಳಿಸುವ ಕುರಿತು.

**ನಿರ್ಣಯ:** ವಿದ್ಯಾರ್ಥಿಗಳು ಮತ್ತು ಪೋಷಕರಿಂದ ಬೇಡಿಕೆ ಬರುತ್ತಿರುವುದಾಗಿ ಪ್ರಾಂಶುಪಾಲರು ಪ್ರಸ್ತಾವನೆ ಸಲ್ಲಿಸಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಘಟಕ ಕಾಲೇಜಾಗಿರುವ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ 2026–27ನೇ ಶೈಕ್ಷಣಿಕ ಸಾಲಿನಿಂದ ಈಗಿರುವ ಐಚ್ಛಿಕ ವಿಷಯಗಳ ಜೊತೆಗೆ ಹೊಸದಾಗಿ **"ಇತಿಹಾಸ – ಐಚ್ಛಿಕ ಕನ್ನಡ – ರಾಜ್ಯಶಾಸ್ತ್ರ"(ಹೆಚ್.ಕೆ.ಪಿ.) ಐಚ್ಛಿಕ ವಿಷಯ ಗುಚ್ಛವನ್ನು** ಸೇರ್ಪಡೆಗೊಳಿಸಲು ಸಭೆಯು ಅನುಮತಿಸಿತು.

**2026:ಎಸಿ–1.05(ಬಿ):** ಸಹ್ಯಾದ್ರಿ ಕಲಾ ಕಾಲೇಜು, ಸಹ್ಯಾದ್ರಿ ವಿಜ್ಞಾನ ಕಾಲೇಜು ಮತ್ತು ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜುಗಳಿಗೆ ಶಾಶ್ವತ ಪಿಹೆಚ್.ಡಿ., ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಕುರಿತು.

ಚರ್ಚೆಯ ನಂತರ ಶಿವಮೊಗ್ಗದ ಸಹ್ಯಾದ್ರಿ ಕಲಾ ಕಾಲೇಜು, ಸಹ್ಯಾದ್ರಿ ವಿಜ್ಞಾನ ಕಾಲೇಜು ಮತ್ತು ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜುಗಳು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾಗಿದ್ದು, ಪಿಹೆಚ್.ಡಿ. ಸಂಶೋಧನಾ ಕೇಂದ್ರಕ್ಕೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಹೊಂದಿರುವುದರಿಂದ ಸದರಿ ಕಾಲೇಜುಗಳ ಪಿಹೆಚ್.ಡಿ. ಸಂಶೋಧನಾ ಕೇಂದ್ರದ ನವೀಕರಣವನ್ನು ಮೂರು ವರ್ಷದ ತಾತ್ಕಾಲಿಕದ ಬದಲಾಗಿ ಶಾಶ್ವತ ಸಂಶೋಧನಾ ಕೇಂದ್ರಗಳಾಗಿ ಮಾನ್ಯತೆ ನೀಡಲು ಸಭೆಯು ಸರ್ವಾನುಮತದಿಂದ ಅನುಮತಿಸಿತು ಮತ್ತು ಶಾಶ್ವತ ಮಾನ್ಯತೆ ನೀಡುವಾಗ ಮೂಲಭೂತ ಸೌಲಭ್ಯಗಳು ಮತ್ತು ಗುಣಮಟ್ಟ ನಿರ್ವಹಣೆ ಕುರಿತಾಗಿ ಕೆಲವು ಷರತ್ತುಗಳನ್ನು ವಿಧಿಸಬೇಕೆಂದು ಕೂಡ ನಿರ್ಣಯಿಸಲಾಯಿತು.

**2026:ಎಸಿ–1.06:** "Smt. Eeramma & Sri Baluru Halappa K. Hithala Village Shikaripura Tq. Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದತ್ತಿನಿಧಿ ಸ್ವರ್ಣಪದಕ ದಾನಿಗಳಾದ ಡಾ.ಕೆ.ಪ್ರಸನ್ನಕುಮಾರ್ ಬಿನ್ ಕೆ.ಹಾಲಪ್ಪ, ಶಿವಮೊಗ್ಗ ಇವರು "Smt. Eeramma & Sri Baluru Halappa, K., Hithala Village, Shikaripura Tq. Gold Medal" ಹೆಸರಿನಲ್ಲಿ 2024–25ನೇ ಶೈಕ್ಷಣಿಕ ಸಾಲಿನಿಂದ (35ನೇ ಘಟಿಕೋತ್ಸವದಿಂದಲೇ ಅನ್ವಯಿಸಿ) **ಕುವೆಂಪು ವಿಶ್ವವಿದ್ಯಾಲಯದ ಸ್ನಾತಕ ಪದವಿಯ ಬಿ.ಎ. ರಾಜ್ಯಶಾಸ್ತ್ರ ವಿಷಯದಲ್ಲಿ** (I to VI Semester) **ಮೊದಲ ಪ್ರಯತ್ನದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ** ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು, ಪದಕದ ದಾನಿಗಳನ್ನು ಅಭಿನಂದಿಸಿತು.

**2026:ಎಸಿ–1.07:** "Smt. Rasheeda Begum and Sri Syed Dastagir Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದತ್ತಿನಿಧಿ ಸ್ವರ್ಣಪದಕ ದಾನಿಗಳಾದ ಡಾ.ಸೈಯದ್ ಸನಾವುಲ್ಲಾ, ಶಿವಮೊಗ್ಗ ಇವರು "Smt. Rasheeda Begum and Sri Syed Dastagir Gold Medal" ಹೆಸರಿನಲ್ಲಿ 2024–25ನೇ ಶೈಕ್ಷಣಿಕ ಸಾಲಿನಿಂದ (35ನೇ ಘಟಿಕೋತ್ಸವದಿಂದ) **ಕುವೆಂಪು ವಿಶ್ವವಿದ್ಯಾಲಯದ ಸ್ನಾತಕ ಪದವಿಯ ಎಲ್ಲಾ ಕೋರ್ಸ್‌ನ ಉರ್ದು ಭಾಷೆಯಲ್ಲಿ (I to IV Semester) ಮೊದಲ ಪ್ರಯತ್ನದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ** ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಸಿ–1.08: 2026–27ನೇ ಶೈಕ್ಷಣಿಕ ಸಾಲಿನಿಂದ ಬಿ.ಇಡಿ. ಪದವಿ ಒಳಗೊಂಡಂತೆ ಎಲ್ಲಾ ಸ್ನಾತಕ ಪದವಿಗಳಿಗೆ ಪ್ರವೇಶಾತಿ ಶುಲ್ಕವನ್ನು ಪರಿಷ್ಕರಣೆ ಮಾಡುವ ಕುರಿತು.

ಚರ್ಚೆ: 2026–27ನೇ ಶೈಕ್ಷಣಿಕ ವಿಶ್ವವಿದ್ಯಾಲಯದ ಸಾಲಿನಿಂದ ಬಿ.ಇಡಿ. ಪದವಿ ಒಳಗೊಂಡಂತೆ ಎಲ್ಲಾ ಸ್ನಾತಕ ಪದವಿಗಳಿಗೆ ಪ್ರವೇಶಾತಿ ಶುಲ್ಕಗಳನ್ನು ಸರ್ಕಾರದ ಏಕರೂಪ ಶುಲ್ಕಗಳನ್ನು ನಿಗದಿಪಡಿಸುವಂತೆ ಕ್ರಮಕೈಗೊಳ್ಳಲು ಸೂಚಿಸಿರುವ ಮೇರೆಗೆ, ದಿನಾಂಕ:21-01-2026 ರಂದು ನಡೆದ ಶುಲ್ಕ ಪರಿಷ್ಕರಣಾ ಸಮಿತಿ ಸಭೆಯ ನಿರ್ಣಯದಂತೆ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜುಗಳಿಗೆ ಹೆಚ್ಚಾಗಿ ಗ್ರಾಮೀಣ ಪ್ರದೇಶದ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವುದರಿಂದ ಸರ್ಕಾರದ ಏಕರೂಪ ಶುಲ್ಕವನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಿದರೆ ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ಹೊರೆಯಾಗುವ ಹಿನ್ನೆಲೆಯಲ್ಲಿ ಎಲ್ಲಾ ಸ್ನಾತಕ ಪದವಿಗಳ ಶುಲ್ಕಗಳನ್ನು ಚಾಲ್ತಿಯಲ್ಲಿರುವ ಶುಲ್ಕಗಳಿಗೆ ರೂ.1000/– ರಿಂದ ರೂ.1500/– ರವರೆಗೆ ಹೆಚ್ಚಿಸಿ ಪರಿಷ್ಕರಣೆ ಮಾಡಲು ಅನುಮೋದನೆಗಾಗಿ ಸಭೆಗೆ ಮಂಡಿಸಲಾಯಿತು.

ಸದಸ್ಯರಾದ ಡಾ.ಜಿ.ಎಂ.ಗಣೇಶ್‌ರವರು ಮಾತನಾಡಿ, ವಿದ್ಯಾರ್ಥಿಗಳು ಪಾವತಿಸಿದ ಶುಲ್ಕಗಳು ಆಯಾ ಉದ್ದೇಶಗಳಿಗೆ ಮಾತ್ರ ವಿನಿಯೋಗವಾಗಬೇಕು ಇ.ಸಿ.ಎ. ಶುಲ್ಕ ಪ್ರತಿ ವಿದ್ಯಾರ್ಥಿಯಿಂದ ಸಂಗ್ರಹಿಸುವ ರೂ.288/–ಗಳಲ್ಲಿ ರೂ.61/–ಗಳನ್ನು ಮಾತ್ರ ಕಾಲೇಜುಗಳಿಗೆ ನೀಡುತ್ತಿದ್ದು, ಕಾಲೇಜು ಹಂತದ ಚಟುವಟಿಕೆಗಳಿಗೆ ಇದು ಸಾಕಾಗುವುದಿಲ್ಲ. Literacy fee Rs.58/-, Career Guidance Fund ರೂ.58/–ಗಳು ಯಾವುದಕ್ಕೆ ಉಪಯೋಗವಾಗುತ್ತದೆ ಎಂಬ ಮಾಹಿತಿ ಇಲ್ಲ. Poor Students Fund ಮಕ್ಕಳಿಗೆ ದೊರೆಯುವುದಿಲ್ಲ ಎಂದರು. ಡಾ.ಸಂಧ್ಯಾಕಾವೇರಿರವರು ಮಾತನಾಡಿ, ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿನ Online Library Facility ಸಂಯೋಜಿತ ಕಾಲೇಜುಗಳಿಗ ವಿದ್ಯಾರ್ಥಿಗಳಿಗೆ ಕೂಡ ದೊರೆಯುವಂತಾಗಬೇಕು ಎಂದರು.

ಪ್ರೊ.ಅಶೋಕ್ ಆರ್. ಲಮಾಣಿರವರು ಮಾತನಾಡಿ, ವಿಶ್ವವಿದ್ಯಾಲಯದ ಮಟ್ಟದಲ್ಲಿ ನಡೆಯುವ ಅಂತರ ಕಾಲೇಜುಗಳ ಸಹ್ಯಾದ್ರಿ ಉತ್ಸವ ಕಾರ್ಯಕ್ರಮದಲ್ಲಿ ಸುಮಾರು 3000ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದು, ಸ್ಪರ್ಧೆಗಳಲ್ಲಿ ಭಾಗವಹಿಸಲು ಕಾಲೇಜು ಅಥವಾ ವಿದ್ಯಾರ್ಥಿಗಳಿಂದ ಯಾವುದೇ ಪ್ರವೇಶ ಶುಲ್ಕ ಪಡೆಯುವುದಿಲ್ಲ. ಇ.ಸಿ.ಎ. ಹಣದಲ್ಲಿಯೇ ಎಲ್ಲಾ ಖರ್ಚುವೆಚ್ಚಗಳನ್ನು ಭರಿಸಲಾಗುತ್ತದೆ ಎಂದರು. ಡಾ.ಎನ್.ಡಿ. ವಿರುಪಾಕ್ಷರವರು ಮಾತನಾಡಿ, ದಕ್ಷಿಣ ವಲಯ ಮತ್ತು ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಖರ್ಚುವೆಚ್ಚಗಳು ಮತ್ತು ಪ್ರವೇಶ ಶುಲ್ಕಗಳನ್ನು ಕೂಡ ವಿಶ್ವವಿದ್ಯಾಲಯವು ಇದೇ ಇ.ಸಿ.ಎ. ಹಣದಿಂದಲೇ ಭರಿಸುತ್ತದೆ ಎಂದರು. ಡಾ. ಯೋಗೇಂದ್ರರವರು ಮಾತನಾಡಿ ಪ್ರಸಾರಾಂಗ ಮತ್ತು ವಿಸ್ತರಣಾ ಚಟುವಟಿಕೆಗಳಿಗೆ Literacy ಶುಲ್ಕ ಉಪಯೋಗವಾಗುತ್ತದೆ ಎಂದರು.

ಡಾ.ರಾಕೇಶ್‌ರವರು ಮಾತನಾಡಿ, ಸಹ್ಯಾದ್ರಿ ಉತ್ಸವ ವಿದ್ಯಾರ್ಥಿಗಳ ಪ್ರತಿಭೆ ಹೊರತರಲು ಉತ್ತಮ ಅವಕಾಶವಾಗಿದ್ದು, ಇದನ್ನು ಈ ಹಿಂದಿನಂತೆ ಸೆಪ್ಟಂಬರ್/ಅಕ್ಟೋಬರ್ ಮಾಹೆಯಲ್ಲಿಯೇ ನಡೆಸಿದರೆ ಇಲ್ಲಿ ವಿಜೇತರಾದ ವಿದ್ಯಾರ್ಥಿಗಳು ಮುಂದಿನ ಹಂತದಲ್ಲಿ ಅಂತರ ವಿಶ್ವವಿದ್ಯಾಲಯ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಅವಕಾಶವಾಗುತ್ತದೆ ಎಂದರು. ಅಲ್ಲದೇ ಸಹ್ಯಾದ್ರಿ ಉತ್ಸವದ ಸುತ್ತೋಲೆಯನ್ನು ಕನಿಷ್ಠ 02 ತಿಂಗಳು ಮುಂಚಿತವಾಗಿಯೇ ಕಳುಹಿಸಿದಲ್ಲಿ ಕಾಲೇಜುಗಳಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲು ಮತ್ತು ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಅನುಕೂಲವಾಗುತ್ತದೆ ಎಂದರು.

Career Guidance Fund ಬಗ್ಗೆ ಮಾತನಾಡಿದ ಪ್ರೊ.ಚಂದ್ರಶೇಖರ್‌ರವರು, ವಿಶ್ವವಿದ್ಯಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವನ್ನು ಆರಂಭಿಸಲಾಗಿದೆ. ಅಂತಿಮ ಪದವಿಯ ವಿದ್ಯಾರ್ಥಿಗಳು ಇದರ ಉಪಯೋಗ ಪಡೆದುಕೊಳ್ಳಬಹುದು. ಇದರ ನೋಂದಣಿಗೆ ಲಿಂಕ್‌ನ್ನು ಕಾಲೇಜುಗಳಿಗೆ ಕಳುಹಿಸಲಾಗುವುದು. ಆಸಕ್ತ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಳ್ಳಬಹುದು. ಇವರಲ್ಲಿ ಎಲ್ಲರನ್ನೂ ತೆಗೆದುಕೊಳ್ಳುವುದಿಲ್ಲ. ನೋಂದಣಿ ಮಾಡಿಕೊಂಡವರಿಗೆ ಒಂದು ಟೆಸ್ಟ್ ನಡೆಸಲಾಗುವುದು. ಅದರಲ್ಲಿ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
-577 451

ಅರ್ಹತೆ ಪಡೆದವರನ್ನು ಮಾತ್ರ ಮುಂದುವರೆಸುತ್ತೇವೆ. ಅವರಿಗೆ ಎಲ್ಲಾ ರೀತಿಯ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಮತ್ತು Communication Skills ತರಗತಿಗಳನ್ನು ಕೂಡ ನೀಡಲಾಗುವುದು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ 2026–27ನೇ ಶೈಕ್ಷಣಿಕ ವಿಶ್ವವಿದ್ಯಾಲಯದ ಸಾಲಿನಿಂದ ಬಿ.ಇಡಿ. ಪದವಿ ಒಳಗೊಂಡಂತೆ ಎಲ್ಲಾ ಸ್ನಾತಕ ಪದವಿಗಳಿಗೆ ಪ್ರವೇಶಾತಿ ಶುಲ್ಕಗಳನ್ನು ಸರ್ಕಾರದ ಏಕರೂಪ ಶುಲ್ಕಗಳನ್ನು ನಿಗದಿಪಡಿಸುವಂತೆ ಕ್ರಮಕೈಗೊಳ್ಳಲು ಸೂಚಿಸಿರುವ ಮೇರೆಗೆ, ದಿನಾಂಕ:21–01–2026 ರಂದು ನಡೆದ ಶುಲ್ಕ ಪರಿಷ್ಕರಣಾ ಸಮಿತಿ ಸಭೆಯ ನಿರ್ಣಯದಂತೆ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜುಗಳಿಗೆ ಹೆಚ್ಚಾಗಿ ಗ್ರಾಮೀಣ ಪ್ರದೇಶದ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವುದರಿಂದ ಸರ್ಕಾರದ ಏಕರೂಪ ಶುಲ್ಕವನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಿದರೆ ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ಹೊರೆಯಾಗುವ ಹಿನ್ನೆಲೆಯಲ್ಲಿ ಎಲ್ಲಾ ಸ್ನಾತಕ ಪದವಿಗಳ ಶುಲ್ಕಗಳನ್ನು ಚಾಲ್ತಿಯಲ್ಲಿರುವ ಶುಲ್ಕಗಳಿಗೆ ರೂ.1000/– ರಿಂದ ರೂ.1500/–ರವರೆಗೆ ಹೆಚ್ಚಿಸಿ ಪರಿಷ್ಕರಣೆ ಮಾಡಲು ಸಭೆಯು ಅನುಮೋದನೆ ನೀಡಿತು.

## ಹಣಕಾಸು ವಿಭಾಗ

**2026:ಎಸಿ–1.09:** 2026–27ನೇ ಆರ್ಥಿಕ ವರ್ಷದ ಆಯ–ವ್ಯಯ ಅಂದಾಜು ಪರಿಶೀಲನೆ ಮತ್ತು ಅನುಮೋದನೆಗಾಗಿ.

**ಚರ್ಚೆ:** ಕುಲಸಚಿವರು ಮಾತನಾಡಿ, ಹಣಕಾಸು ಅಧಿಕಾರಿಗಳಾದ ಪ್ರೊ.ಹೆಚ್.ಎನ್. ರಮೇಶ್‌ರವರು ವೈಯಕ್ತಿಕ ಕಾರಣಗಳ ನಿಮಿತ್ತ ಸಭೆಗೆ ಆಗಮಿಸಿಲ್ಲವಾದ ಕಾರಣ, ವಿಶ್ವವಿದ್ಯಾಲಯದ 2026–27ನೇ ಸಾಲಿನ ಆರ್ಥಿಕ ವರ್ಷದ ಆಯವ್ಯಯ ಅಂದಾಜನ್ನು ಕುಲಸಚಿವ (ಮೌಲ್ಯಮಾಪನ)ರವರು ಮಂಡಿಸುತ್ತಾರೆ ಎಂದರು. ನಂತರ ಕುಲಸಚಿವರು (ಮೌಲ್ಯಮಾಪನ) ರವರಾದ ಪ್ರೊ.ಆರ್.ತಿಮ್ಮರಾಯಪ್ಪರವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 2000. ಪ್ರಕರಣ 48(1) ಮತ್ತು 32(ii)ರ ಅನ್ವಯ ದಿನಾಂಕ:23–03–2026ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಹಾಗೂ ದಿನಾಂಕ:25–03–2026ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಅನುಮೋದನೆಯಾಗಿರುವ ವಿಶ್ವವಿದ್ಯಾಲಯದ 2026–27ನೇ ಆರ್ಥಿಕ ವರ್ಷದ ರೂ.5313.60ಲಕ್ಷಗಳ ಕೊರತೆಯ ಆಯ–ವ್ಯಯ ಅಂದಾಜನ್ನು ಸಭೆಯ ಅವಲೋಕನ ಮತ್ತು ಅನುಮೋದನೆಗಾಗಿ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳನ್ನು ನ್ಯಾಕ್ ಮಾನ್ಯತೆಯನ್ನು ಗಮನದಲ್ಲಿಟ್ಟುಕೊಂಡು ಯಥಾವತ್ತಾಗಿ ಮುಂದುವರಿಸಬೇಕಾಗಿದೆ. ಕೊರತೆಯನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದಿಂದ ಹೆಚ್ಚುವರಿ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸುವುದು, ಆಡಳಿತಾತ್ಮಕ ವೆಚ್ಚಗಳಲ್ಲಿ ಕಡಿತಗೊಳಿಸುವುದು, ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಭರ್ತಿಗೆ ಪ್ರಯತ್ನ, ಕಾರ್ಯಭಾರಕ್ಕೆ ಅನುಗುಣವಾಗಿ ಹೆಚ್ಚುವರಿ ಹೊರಗುತ್ತಿಗೆ ನೌಕರರು ಹಾಗೂ ಅತಿಥಿ ಉಪನ್ಯಾಸಕರ ಸಂಖ್ಯೆಯನ್ನು ಕಡಿತಗೊಳಿಸುವುದು ಮತ್ತು ಬಾಕಿ ಇರುವ ಪರಿನಿಯಮಗಳಿಗೆ ಆದ್ಯತೆಯ ಮೇರೆಗೆ ಸರ್ಕಾರದ ಅನುಮೋದನೆ ಪಡೆಯಬೇಕಾಗಿದೆ. 2025–26ನೇ ಸಾಲಿನಲ್ಲಿ ಪಿಂಚಣಿಗಾಗಿ ಸರ್ಕಾರವು ರೂ. 2500 ಲಕ್ಷಗಳನ್ನು ನೀಡಿದ್ದು, 1050.25 ಲಕ್ಷಗಳ ಪಿಂಚಣಿ ಪಾವತಿ ಬಾಕಿ ಇರುತ್ತದೆ. 2026–27 ಸಾಲಿನಲ್ಲಿ 5935.61 ಲಕ್ಷಗಳನ್ನು ಪಿಂಚಣಿಗೆ ಅಂದಾಜಿಸಲಾಗಿದ್ದು, ಸರ್ಕಾರವು ಕೇವಲ ರೂ.2000 ಲಕ್ಷಗಳನ್ನು ಮಾತ್ರ ನೀಡಿದೆ. ಆದಾಗ್ಯೂ ಕೂಡ ರೂ.3935.61ಲಕ್ಷಗಳ ಕೊರತೆ ಇದೆ ಎಂಬ ವಿವರಗಳನ್ನು ನೀಡಿದರು.

ಡಾ.ರಾಕೇಶ್‌ರವರು ಮಾತನಾಡಿ, ಕೇಂದ್ರ ಸರ್ಕಾರದಿಂದ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಿದಲ್ಲಿ ಹೆಚ್ಚಿನ ಅನುದಾನ ಪಡೆಯಬಹುದು ಎಂದರು. ಡಾ.ಸಂಧ್ಯಾಕಾವೇರಿರವರು ಮಾತನಾಡಿ, ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಡುವೆ Collabarative Research Activities and Programmes ಆಗಬೇಕು. ವಿಶ್ವವಿದ್ಯಾಲಯದಲ್ಲಿ ನಡೆಯುವ ಸೆಮಿನಾರ್, ಕಾರ್ಯಾಗಾರ, ಸಮ್ಮೇಳನಗಳನ್ನು ಕೂಡ ಕಾಲೇಜುಗಳ ಸಹಯೋಗದೊಂದಿಗೆ ನಡೆಸಬೇಕು. ಇದರಿಂದ ಪದವಿ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
...451

ವಿದ್ಯಾರ್ಥಿಗಳಿಗೆ ಕೂಡ ಸಂಶೋಧನೆಯಲ್ಲಿ ಆಸಕ್ತಿ ಬರುತ್ತದೆ. ಇದಲ್ಲದೇ ಉನ್ನತ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ವಿದೇಶಿ ಶಿಕ್ಷಣ/ಸಂಶೋಧನಾ ಸಂಸ್ಥೆಗಳೊಂದಿಗೆ Collabaration ಮಾಡಿಕೊಳ್ಳಬೇಕು. ಅಲ್ಲದೇ, ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಮತ್ತು ಅಲ್ಲಿನ ಪ್ರಯೋಗಾಲಯಗಳಲ್ಲಿನ ಸೌಲಭ್ಯಗಳ ಮಾಹಿತಿ ಇರುವುದಿಲ್ಲ. ಇದರಿಂದಾಗಿ, ವಿದ್ಯಾರ್ಥಿಗಳು ಉತ್ತಮ ಗುಣಮಟ್ಟದ ಶಿಕ್ಷಣ ಬಯಸಿ ಖಾಸಗಿ ವಿಶ್ವವಿದ್ಯಾಲಯಗಳತ್ತ ತೆರಳುತ್ತಿದ್ದಾರೆ. Collabarative Activities ಮೂಲಕ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಿಗೆ ಭೇಟಿ ನೀಡಿದಲ್ಲಿ ಅವರಿಗೆ ಅದೇ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಅಧ್ಯಯನ ಮಾಡಬೇಕೆಂಬ ಆಸಕ್ತಿ ಬರುತ್ತದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಪಿ.ಎಂ.ಉಷಾ ಯೋಜನೆ ಮತ್ತೆ ಬರುತ್ತಿದೆ. ಈಗಿರುವ ಹಳೆಯ ರೂಸಾ ಅನುದಾನದಲ್ಲಿ ರೂ.1.25ಕೋಟಿಗಳ ಹಣ ಬಾಕಿ ಇತ್ತು ಅದನ್ನು ಈಗ ವೆಚ್ಚ ಮಾಡುತ್ತಿದ್ದೇವೆ. ಇದು ವೆಚ್ಚವಾದಲ್ಲಿ ಮಾತ್ರ ಮುಂದಿನ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಲು ಸಾಧ್ಯವಾಗುತ್ತದೆ. ನೀತಿ ಆಯೋಗಕ್ಕೆ ರೂ.14 ಕೋಟಿಗಳ ಪ್ರಸ್ತಾವನೆ ಸಲ್ಲಿಸಿದ್ದೇವೆ. ಆಂತರಿಕ ವೆಚ್ಚಗಳನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ವಿದ್ಯುತ್ ವೆಚ್ಚವನ್ನು ಕಡಿಮೆ ಮಾಡಲು ಸೋಲಾರ್ ಪವರ್ ಪ್ರಾಜೆಕ್ಟ್ ಮಾಡುತ್ತಿದ್ದೇವೆ. ಹೊರಗುತ್ತಿಗೆ ನೌಕರರ ಸಂಖ್ಯೆಯನ್ನು ಕಡಿಮೆ ಮಾಡುವಂತೆ ದಿನಾಂಕ: 23-03-2026 ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಸರ್ಕಾರದ ಪ್ರತಿನಿಧಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. CSR ಅನುದಾನ ತರುವ ನಿಟ್ಟಿನಲ್ಲಿ ಕೂಡ ಪ್ರಯತ್ನಿಸುತ್ತಿದ್ದೇವೆ. ವಿಶ್ವವಿದ್ಯಾಲಯದ ಅಧ್ಯಾಪಕರು ವೈಯಕ್ತಿಕ ಸಂಶೋಧನಾ ಪ್ರಾಜೆಕ್ಟ್‌ಗಳನ್ನು ತರಲು ಪ್ರಸ್ತಾವನೆಗಳನ್ನು ಸಲ್ಲಿಸಿದ್ದಾರೆ ಎಂದ ಅವರು ಡಾ.ಸಂಧ್ಯಾಕಾವೇರಿರವರ ಸಲಹೆಯಂತೆ ಕಾಲೇಜು ಮತ್ತು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ನಡುವೆ Collabarative Activitiesಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆ ಹಾಗೂ ಪರಿಶೀಲನೆಯ ನಂತರ ವಿಶ್ವವಿದ್ಯಾಲಯದ 2026-27ನೇ ಆರ್ಥಿಕ ವರ್ಷದ ಆಯ-ವ್ಯಯ ಅಂದಾಜನ್ನು ಅನುಮೋದಿಸಿದ ಸಭೆಯು ಸದಸ್ಯರು ನೀಡಿರುವ ಸಲಹೆಗಳನ್ನು ಅನುಷ್ಠಾನಗೊಳಿಸಲು ಸರ್ವಾನುಮತದಿಂದ ನಿರ್ಣಯಿಸಿತು.

**2026:ಎಸಿ-1.10:** 2024-25ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳನ್ನು ಪರಿಶೀಲನೆ ಮತ್ತು ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆ ಮತ್ತು ಪರಿಶೀಲನೆಯ ನಂತರ ಸರ್ಕಾರಕ್ಕೆ ಸಲ್ಲಿಸಲು ಸಿದ್ಧಪಡಿಸಲಾಗಿರುವ ವಿಶ್ವವಿದ್ಯಾಲಯದ 2024-25ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳನ್ನು ಸಭೆಯು ಅನುಮೋದಿಸಿತು.

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2026:ಎಸಿ-1.11:** 2026-27ನೇ ಶೈಕ್ಷಣಿಕ ಸಾಲಿನ ಬಿ.ಬಿ.ಎ. ಕೋರ್ಸ್‌ನ್ನು ರದ್ದುಗೊಳಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಚಿಕ್ಕಮಗಳೂರು ಇವರು ಸಲ್ಲಿಸಿರುವ ಮನವಿಯ ಮೇರೆಗೆ 2026-27ಸಾಲಿನಿಂದ ಸದರಿ ಕಾಲೇಜಿನಲ್ಲಿ ಬಿ.ಬಿ.ಎ. ಪದವಿಯನ್ನು ಶಾಶ್ವತವಾಗಿ ರದ್ದುಪಡಿಸುವ ಬಗ್ಗೆ ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

## ಪರೀಕ್ಷಾ ವಿಭಾಗ

**2026:ಎಸಿ–1.12:** (Non-NEP) ಅವಧಿ ಪೂರ್ಣಗೊಳಿಸಿದ (Double the Duration) ಸ್ನಾತಕ/ ಸ್ನಾತಕೋತ್ತರ ರೆಗ್ಯೂಲರ್ ಪದವಿ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಪರೀಕ್ಷೆಗೆ ಅವಕಾಶ ನೀಡುವ ಕುರಿತು.

**ಚರ್ಚೆ:** ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡುತ್ತಾ, ದ್ವಿಗುಣ ಅವಧಿ (Double the Duration) ಪೂರ್ಣಗೊಳಿಸಿದ Non-NEP ಸ್ನಾತಕ/ಸ್ನಾತಕೋತ್ತರ ರೆಗ್ಯೂಲರ್ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಪರೀಕ್ಷೆಗೆ ಅವಕಾಶ ನೀಡಲು ಸಿಂಡಿಕೇಟ್ ಸಭೆಗಳಲ್ಲಿ ಅನುಮೋದನೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ 2003–04ನೇ ಸಾಲಿನಿಂದ ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾಗಿ ಪದವಿ ಪೂರೈಸಲಾಗದ ವಿದ್ಯಾರ್ಥಿಗಳು ಅವಕಾಶ ನೀಡುವಂತೆ ಮನವಿ ಸಲ್ಲಿಸಿದ್ದಾರೆ. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿಯೂ ಅವಕಾಶ ನೀಡಿದ್ದಾರೆ. ಸಭೆ ಅನುಮತಿಸಿದಲ್ಲಿ ಪರೀಕ್ಷೆ ನಡೆಸಲಾಗುವುದು. ಡಾ.ಚಿದಾನಂದ ಮತ್ತು ಡಾ.ಸಂಧ್ಯಾಕಾವೇರಿರವರು ಮಾತನಾಡಿ, ಇದೊಂದು ಕಡೆಯ ಅವಕಾಶ ಎಂದು ನೀಡಬಹುದು ಎಂದರು. ಪ್ರೊ.ಪಿ.ಎ. ವರ್ಗೀಸ್‌ರವರು ಮಾತನಾಡಿ, ಹಳೆಯ ಸಿಲಬಸ್ ಈಗ ಇಲ್ಲ ಅವರು ಯಾವುದನ್ನು ಬರೆಯಬೇಕು ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಸದರಿ ವಿದ್ಯಾರ್ಥಿಗಳಿಗೆ equivalent Syllabus ನ್ನು ನಿಗದಿಪಡಿಸಿ ನೀಡಲಾಗುವುದು. ಈ ಹಿಂದೆ ಯಾವುದನ್ನೇ ಓದಿದ್ದರೂ ಈಗ ಇದೇ ಸಿಲಬಸ್‌ನ್ನು ಓದಿ ಪರೀಕ್ಷೆ ಬರೆಯಬೇಕಾಗುತ್ತದೆ. ವಿವಿಧ ವರ್ಷಗಳ ವಿದ್ಯಾರ್ಥಿಗಳನ್ನು ಒಂದು ಗುಂಪು ಮಾಡಿಕೊಂಡು ಅವರಿಗೆ ಒಂದೇ ರೀತಿಯ ಪ್ರಶ್ನೆಪತ್ರಿಕೆ ಒದಗಿಸಲಾಗುವುದು. ಅವರು ಅದನ್ನೇ ಬರೆಯುತ್ತಾರೆ. ಅವರಿಗೆ ಅವರು ಈ ಹಿಂದೆ ಓದಿರುವ ಪ್ರಶ್ನೆಪತ್ರಿಕೆ ನೀಡುವುದಿಲ್ಲ ಎಂದರು.

ಕುಲಸಚಿವರು ಮಾತನಾಡಿ, ಒಂದೆರಡು ಪತ್ರಿಕೆಗಳಲ್ಲಿ ಅನುತ್ತೀರ್ಣರಾಗಿ ಪದವಿ ಪಡೆಯಲು ಅವಕಾಶ ವಂಚಿತರಾಗಿರುವವರಿಗೆ ಒಂದು ಅವಕಾಶ ನೀಡಿದಲ್ಲಿ ಅವರು ಉನ್ನತ ಶಿಕ್ಷಣ, ಉದ್ಯೋಗ ಮತ್ತು ಉದ್ಯೋಗದಲ್ಲಿ ಬಡ್ತಿ ಪಡೆಯಲು ಅನುಕೂಲವಾಗುತ್ತದೆ. ಪರೀಕ್ಷೆ ನಡೆಸುವ ಬಗ್ಗೆ ಸಾಕಷ್ಟು ಮುಂಚೆಯೇ ಸುತ್ತೋಲೆ ಹೊರಡಿಸಬೇಕು ಮತ್ತು ಈ ಬಗ್ಗೆ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನೀಡಬೇಕು. ಕಾಲೇಜಿನವರು ಕೂಡ ಇದನ್ನು ಹಳೆಯ ವಿದ್ಯಾರ್ಥಿಗಳ ಗಮನಕ್ಕೆ ತರಬೇಕು ಎಂದರು.

ಡಾ.ಗಣೇಶ್‌ರವರು ಮಾತನಾಡಿ, ಎಲ್ಲಾ ಕಾಲೇಜುಗಳಿಗೆ ಪರೀಕ್ಷಾ ಕೇಂದ್ರ ನೀಡುವುದರ ಬದಲು ಕೆಲವು ನಿಗದಿತ ಕೇಂದ್ರಗಳನ್ನು ಮಾತ್ರ ನೀಡಿದರೆ ಉತ್ತಮ. ಇದರಿಂದ ಹಣಕಾಸಿನ ಹೊರೆ ಕೂಡ ಕಡಿಮೆಯಾಗುತ್ತದೆ ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಇದಕ್ಕಾಗಿ ಪ್ರತ್ಯೇಕ ಪರೀಕ್ಷಾ ಕೇಂದ್ರಗಳನ್ನು ತೆರೆಯುವುದಿಲ್ಲ. ರೆಗ್ಯುಲರ್ ಸೆಮಿಸ್ಟರ್ ಪರೀಕ್ಷೆಗಳ ಜೊತೆಯಲ್ಲಿಯೇ ಈ ಪರೀಕ್ಷೆಗಳನ್ನು ಪ್ರತ್ಯೇಕವಾಗಿ ನಡೆಸಲಾಗುವುದು. ಇದಕ್ಕಾಗಿ ಸದರಿ ವಿದ್ಯಾರ್ಥಿಗಳಿಗೆ ನಿಗದಿತ ಪರೀಕ್ಷಾ ಶುಲ್ಕದೊಂದಿಗೆ ರೂ.5000/–ಗಳ ವಿಶೇಷ ಶುಲ್ಕ ವಿಧಿಸಲಾಗುವುದು ಎಂದರು.

ಪ್ರೊ.ಜಿ.ಜೆ. ಸತೀಶ್‌ರವರು ಮಾತನಾಡಿ, ಇದೇ ರೀತಿ ಪಿಹೆಚ್.ಡಿ. ಸಂಶೋಧನಾರ್ಥಿಗಳಿಗೆ ಕೂಡ ಅವಧಿಯನ್ನು ವಿಸ್ತರಿಸಿದರೆ ಒಳ್ಳೆಯದಾಗುತ್ತದೆ. ಅವರಿಗೆ ವಿಸ್ತರಣೆ ನೀಡದೇ ನೋಂದಣಿಯನ್ನು ರದ್ದುಗೊಳಿಸುವುದಾಗಿ ತಿಳಿಸುತ್ತಿದ್ದಾರೆ. ಮಹಿಳೆಯರಿಗೆ ಅವರದೇ ಆದ ಸಮಸ್ಯೆಗಳಿವೆ. ಅವರಿಗೂ ಕೂಡ ನೋಂದಣಿ ರದ್ದುಪಡಿಸದೇ ಶುಲ್ಕ ಪಾವತಿಸಿಕೊಂಡು ಅವಕಾಶ ನೀಡಿ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಮಾನ್ಯ ಕುಲಪತಿಯವರು ಮಾತನಾಡಿ, ಅಂಥವರದು ಕೇಸ್ ಬೈ ಕೇಸ್ ನೋಡಬೇಕು. ನೋಂದಣಿ ಮಾಡಿಕೊಂಡು 11–12 ವರ್ಷಗಳಾಗಿದ್ದು, ನಡುವೆ ಬ್ರೇಕ್ ಆಗಿರುತ್ತೆ. ಅಂತಹವರನ್ನು ಮುಂದುವರಿಸುವುದು ಹೇಗೆ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, 2022ರ ಯು.ಜಿ.ಸಿ. ರೆಗ್ಯುಲೇಷನ್‌ನಲ್ಲಿ ಪೂರ್ಣಾವಧಿ ಸಂಶೋಧನಾರ್ಥಿಗೆ 5+2 ವರ್ಷಗಳು ಮತ್ತು ಪಾರ್ಟ್‌ಟೈಂನವರಿಗೆ 5+3 ವರ್ಷ ಇದೆ. ಜೊತೆಗೆ 242ದಿನಗಳ ಶಿಶುಪಾಲನಾ ರಜೆ ಕೂಡ ಇದೆ. ವಿಜ್ಞಾನ ವಿಷಯಗಳಲ್ಲಿ ತುಂಬಾ ಗ್ಯಾಪ್ ಆದರೆ ಮುಂದುವರಿಕೆ ಕಷ್ಟವಾಗುತ್ತದೆ. ನೈಜ ಪ್ರಕರಣಗಳಲ್ಲಿ ಅವಕಾಶ ನೀಡಲಾಗುತ್ತಿದೆ ಎಂದರು.

ಡಾ.ಎನ್.ಡಿ.ವಿರೂಪಾಕ್ಷರವರು ಮಾತನಾಡಿ 7–8 ವರ್ಷಗಳ ಕಾಲ ಸಂಶೋಧನೆ ಮಾಡಲು ಅವಕಾಶ ನೀಡಲಾಗುತ್ತದೆ. ಸಂಶೋಧನೆ ಮುಗಿಸಿದವರಿಗೆ ಮಹಾಪ್ರಬಂಧ ಸಲ್ಲಿಸಲು ಕೂಡ ಅವಕಾಶ ನೀಡಿದರೆ ಒಳ್ಳೆಯದು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, 2–3 ವರ್ಷ ಬ್ರೇಕ್ ನಂತರ ಮಹಾಪ್ರಬಂದ ಸಲ್ಲಿಸುವುದಾಗಿ ಬಂದಲ್ಲಿ ಅವರ ಥೀಸೀಸ್ ಬಗ್ಗೆ ಅನುಮಾನ ಬರುತ್ತದೆ. ಆದುದರಿಂದ ಅವರಿಗೆ ಮರು ನೋಂದಣಿಗೆ ಅವಕಾಶ ನೀಡಿ, ಅವರು ಮಾರ್ಗದರ್ಶಕರ ಜೊತೆ ಸಮಾಲೋಚನೆ ನಡೆಸಿ, ಸಂಶೋಧನೆ ಮುಗಿಸಿ ಮತ್ತೊಮ್ಮೆ ಸಲ್ಲಿಸಲು ಅವಕಾಶ ನೀಡಬಹುದು ಎಂದರು. ಡಾ.ಜಿ.ಜೆ. ಸತೀಶ್‌ರವರು ಮಾತನಾಡಿ ಮರುನೋಂದಣಿ ನೀಡಿದಲ್ಲಿ ಅವರು ಪ್ರಬಂಧ ಸಲ್ಲಿಸಲು ಮತ್ತೊಮ್ಮೆ ಕನಿಷ್ಠ ಅವಧಿಯವರೆಗೆ ಕಾಯಬೇಕಾಗುತ್ತದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು ಕನಿಷ್ಟ ಅವದಿಯನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಬಹುದು ಎಂದರು.

ಕುಲಸಚಿವರು ಮಾತನಾಡಿ, ಪ್ರತಿಯೊಂದು ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಇಂತಹ ಎಷ್ಟು ಪ್ರಕರಣಗಳಿವೆ ಎಂಬುದನ್ನು ಪರಿಶೀಲಿಸಿ ಡಾಕ್ಟರಲ್ ಸಮಿತಿಯಲ್ಲಿ ಚರ್ಚಿಸಿ, ಪ್ರತಿ ಪ್ರಕರಣವನ್ನೂ ಪರಿಶೀಲಿಸಿ ವಿಶ್ವವಿದ್ಯಾಲಯಕ್ಕೆ ನೀಡಿದಲ್ಲಿ ಕ್ರಮ ಕೈಗೊಳ್ಳಲು ಅನುಕೂಲವಾಗುತ್ತದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಮರು ನೋಂದಣಿಗೆ ಅವಕಾಶವಿದ್ದು, ಅವರಿಂದ ಮಾಹಿತಿ ಪಡೆದು ಅಳವಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ದ್ವಿಗುಣ ಅವಧಿ ಪೂರ್ಣಗೊಳಿಸಿದ Non-NEP ಸ್ನಾತಕ/ ಸ್ನಾತಕೋತ್ತರ ರೆಗ್ಯೂಲರ್ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಪರೀಕ್ಷೆಗೆ ಕೊನೆಯ ಅವಕಾಶ ನೀಡಲು ಅನುಮತಿಸಿದ ಸಭೆಯು, ಮೇಲೆ ಚರ್ಚಿಸಿದಂತೆ ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಿತು.

## ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು

**2026:ಎಸಿ–1.13: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**2026:ಎಸಿ–1.13(1): ಡಾ.ರಾಕೇಶ್ ಎಸ್.ಪಿ. : ಬಿ.ಇಡಿ. ಪ್ರವೇಶಾತಿ ದಿನಾಂಕವನ್ನು ಮುಂದೂಡುವ ಕುರಿತು.**

ಡಾ.ರಾಕೇಶ್ ಎಸ್.ಪಿ. ರವರು ಮಾತನಾಡಿ, 2025–26ನೇ ಸಾಲಿನ ಪ್ರಥಮ ವರ್ಷದ ಸದಸ್ಯರಾದ ಡಾ.ರಾಕೇಶ್ ಎಸ್.ಪಿ. ರವರು ಮಾತನಾಡಿ, 2025–26ನೇ ಸಾಲಿನ ಪ್ರಥಮ ವರ್ಷದ ಬಿ.ಇಡಿ. ಪ್ರವೇಶಾತಿ ದಿನಾಂಕವು 30–03–2026ಕ್ಕೆ ಅಂತ್ಯಗೊಂಡಿದ್ದು, ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಎಲ್ಲಾ ಬಿ.ಇಡಿ. ಕಾಲೇಜುಗಳಲ್ಲಿ ಯು.ಯು.ಸಿ.ಎಂ.ಎಸ್. ಪೋರ್ಟ್‌ಲ್‌ನಲ್ಲಿ ಆಗುತ್ತಿರುವ ತಾಂತ್ರಿಕ ತೊಂದರೆಗಳಿಂದ ಕೆಲವು ವಿದ್ಯಾರ್ಥಿಗಳ ಪ್ರವೇಶಾತಿ ಮಾಡಲು ಸಾಧ್ಯವಾಗಿರುವುದಿಲ್ಲ. ಆದುದರಿಂದ, ದಂಡರಹಿತ ದಿನಾಂಕವನ್ನು ವಿಸ್ತರಿಸಿ ಯು.ಯು.ಸಿ.ಎಂ.ಎಸ್. ಮೂಲಕ ನೋಂದಣಿಗೆ ಅನುಕೂಲ ಮಾಡಿಕೊಡುವಂತೆ ಕೋರಿದರು. ಡಾ.ಜಿ.ಎಂ. ಗಣೇಶ್ ಮತ್ತು ಡಾ.ಚಿದಾನಂದ ಎನ್.ಕೆ.ರವರು ಕೂಡ ಮಾತನಾಡಿ, ಪೋರ್ಟ್‌ಲ್‌ನಲ್ಲಿ ತಾಂತ್ರಿಕ ತೊಂದರೆ ಇರುವುದರಿಂದ ಪ್ರವೇಶಾತಿಗೆ ದಂಡರಹಿತ ದಿನಾಂಕವನ್ನು ಮುಂದೂಡುವಂತೆ ವಿನಂತಿಸಿದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಚರ್ಚೆಯ ನಂತರ, ಯು.ಯು.ಸಿ.ಎಂ.ಎಸ್. ಪೋರ್ಟಲ್‌ನಲ್ಲಿ ತಾಂತ್ರಿಕ ತೊಂದರೆಗಳಿಂದ ಕೆಲವು ವಿದ್ಯಾರ್ಥಿಗಳ ಪ್ರವೇಶಾತಿಗೆ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ, 2025-26ನೇ ಸಾಲಿನ ಪ್ರಥಮ ವರ್ಷದ ಬಿ.ಇಡಿ. ಪ್ರವೇಶಾತಿ ದಿನಾಂಕವನ್ನು ದಂಡರಹಿತವಾಗಿ ದಿನಾಂಕ:20-04-2026 ರವರೆಗೆ ಮುಂದೂಡಲು ನಿರ್ಣಯಿಸಲಾಯಿತು.

**2026:ಎಸಿ-1.13(2): ಡಾ.ಜಿ.ಎಂ.ಗಣೇಶ್:** ಬಿ.ಇಡಿ. ಮಾನಿಟರಿಂಗ್ ಸಮಿತಿ ಕುರಿತು.

ಡಾ.ಜಿ.ಎಂ.ಗಣೇಶ್‌ರವರು ಮಾತನಾಡಿ, ಬಿ.ಇಡಿ. 4ನೇ ಸೆಮಿಸ್ಟರ್‌ನಲ್ಲಿ ಶೇ.75ಕ್ಕಿಂತ ಹೆಚ್ಚಿನ ಅಂಕಗಳು ಪ್ರಾಯೋಗಿಕ ತರಗತಿಗಳಿಗೆ ಇರುತ್ತದೆ. ಇದಕ್ಕಾಗಿ ವಿದ್ಯಾರ್ಥಿಗಳು ಪ್ರಾಯೋಗಿಕ ತರಗತಿಗಳಲ್ಲಿ ಪಾಲ್ಗೊಂಡು ಅದಕ್ಕೆ ಸಂಬಂಧಪಟ್ಟ ರೆಕಾರ್ಡ್ ಬುಕ್‌ಗಳನ್ನು ನಿರ್ವಹಿಸಬೇಕು. ಈ ಹಿಂದೆ ವಿಶ್ವವಿದ್ಯಾಲಯ ರಚಿಸಿದ ಮಾನಿಟರಿಂಗ್ ಸಮಿತಿಯವರು ಸದರಿ ರೆಕಾರ್ಡ್ ಬುಕ್‌ಗಳನ್ನು ಪರಿಶೀಲಿಸಿ, ಆಯ್ದ ವಿದ್ಯಾರ್ಥಿಗಳನ್ನು ಸಂದರ್ಶಿಸಿ, ಕಾಲೇಜಿನವರು ನೀಡಿರುವ ಅಂಕಗಳು ಸರಿಯಾಗಿವೆಯೇ? ಎಂದು ಪರಿಶೀಲಿಸುತ್ತಿದ್ದರು. ನೀಡಿರುವ ಅಂಕಗಳಲ್ಲಿ ವ್ಯತ್ಯಾಸಗಳಿದ್ದಲ್ಲಿ ಅದನ್ನು ಸಮಿತಿಯು ಮಾರ್ಜನಿಸುತ್ತಿತ್ತು. ಆದರೆ ಈಗ ಸಿ.ಬಿ.ಸಿ.ಎಸ್. ಪದ್ಧತಿ ಬಂದಿದ್ದು, ಇದರಲ್ಲಿ ಮಾನಿಟರಿಂಗ್ ಸಮಿತಿಯ ಬಗ್ಗೆ ಪ್ರಸ್ತಾಪವಿಲ್ಲ. ಇದರಿಂದಾಗಿ ಅಂಕಗಳನ್ನು ಪರಿಶೀಲಿಸುವ ಪದ್ಧತಿ ಇಲ್ಲವಾದಲ್ಲಿ ಶಿಕ್ಷಣದ ಗುಣಮಟ್ಟ ಕಡಿಮೆಯಾಗುತ್ತದೆ. ಬಿ.ಇಡಿ. ಶಿಕ್ಷಣದ ಗುಣಮಟ್ಟವನ್ನು ಕಾಪಾಡುವ ದೃಷ್ಟಿಯಿಂದ ಮಾನಿಟರಿಂಗ್ ಕಮಿಟಿ ಭೇಟಿ ನೀಡುವುದನ್ನು ಮತ್ತೆ ಆರಂಭಿಸಬೇಕು. ಇದಲ್ಲದೇ ಈಗ ಪ್ರಾಯೋಗಿಕ ಪರೀಕ್ಷೆಗಳನ್ನು ಯಾರು ಪರಿಶೀಲಿಸಬೇಕೆಂದು ತಿಳಿಸಿಲ್ಲ. ಪ್ರಾಯೋಗಿಕ ಪರೀಕ್ಷೆಗಳ ನೈಜತೆ ಮತ್ತು ಗುಣಮಟ್ಟ ಪರಿಶೀಲನೆಗಾಗಿ ಪ್ರಾಯೋಗಿಕ ಪರೀಕ್ಷೆಗಳ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಸಮಿತಿಯು ಭೇಟಿ ನೀಡಿ ಪರಿಶೀಲಿಸಬೇಕು ಎಂದರು.
ಇದಕ್ಕೆ ಡಾ.ಚಿದಾನಂದರವರು ಕೂಡ ಧ್ವನಿಗೂಡಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಬಿ.ಇಡಿ.ಯು ವೃತ್ತಿಪರ ಶಿಕ್ಷಣವಾಗಿರುವುದರಿಂದ ಪರಿಶೀಲನೆಗಾಗಿ ಮಾನಿಟರಿಂಗ್ ಕಮಿಟಿಯ ಅಗ್ಯವಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಕುಲಪತಿಗಳು
ಕುಲಪತಿಗಳು
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ - 577 451,
ಶಿವಮೊಗ್ಗ ಜಿಲ್ಲೆ.